ಒಎಸ್. 733/2021
ಪಿ. ಡಬ್ಲ್ಯೂ 1-

ದಿನಾಂಕಃ 19.01.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.
ಪಾಟೀ ಸವಾಲುಃ 1 ನೇ ಪ್ರತಿವಾದಿ ಪರ ಶ್ರೀ ಜಿ.ಎಸ್. ವಕೀಲರಿಂದಃ

ಮುದ್ದಯ್ಯ ಎಂದರೆ ನಿಮ್ಮ ತಂದೆಯ ತಾತ, ನಿಮ್ಮ ಮುತ್ತಾತ ಎಂದರೆ ಸರಿ. ನಿಮ್ಮ ತಂದೆ ಹೆಸರು ರಮೇಶ್ ಈ ದಾವೆಯ 2 ನೇ ಪ್ರತಿವಾದಿ ಎಂದರೆ ಸರಿ. ಮುದ್ದಯ್ಯರವರಿಗೆ ಶಿವಲಿಂಗಯ್ಯ ಮತ್ತು ಮಹದೇವಯ್ಯ ಎಂಬ ಇಬ್ಬರು ಮಕ್ಕಳು ಎಂದರೆ ಸರಿ. ಶಿವಲಿಂಗಯ್ಯರವರಿಗೆ 1 ನೇ ಪ್ರತಿವಾದಿ ಸಿದ್ದಲಿಂಗಯ್ಯ ಅಲಿಯಾಸ್ ಸಿದ್ದಯ್ಯ ಎಂಬ ಒಬ್ಬರೇ ಮಗ ಎಂದರೆ ಸರಿ. ಅವರು ಹುಟ್ಟು ದೈಹಿಕ ಅಂಗವಿಕಲರು ಎಂದರೆ ಸರಿ. 2 ನೇ ಮಗ ಮಹದೇವಯ್ಯರವರಿಗೆ ನಿಮ್ಮ ತಂದೆ ರಮೇಶ ಎನ್.ಎನ್ 2 ನೇ ಪ್ರತಿವಾದಿ ಒಬ್ಬರೇ ಮಗ ಎಂದರೆ ಸರಿ. 2 ನೇ ಪ್ರತಿವಾದಿರವರಿಗೆ ನೀವು 1 ನೇ ವಾದಿ, 2 ನೇ ವಾದಿ ಅರುಣ್ ಕುಮಾರ್ ಇಬ್ಬರೇ ಮಕ್ಕಳು ಎಂದರೆ ಸರಿ. ಈಗ ಶಿವಲಿಂಗಪ್ಪ, ಮುದ್ದಯ್ಯ ಮತ್ತು ಮಹಾದೇವಯ್ಯ, ತಾತ, ಮುತ್ತಾತಂದಿರು ಯಾರು ಜೀವಂತ ಇಲ್ಲ ಎಂದರೆ ಸರಿ. ಈ ದಾವೆಯನ್ನು ಏತಕ್ಕಾಗಿ ಸಲ್ಲಿಸಿದ್ದೀರಿ ಎಂದರೆ ಆಸ್ತಿ ವಿಭಾಗ ಆಗಿಲ್ಲ ಎಂದು ಸಲ್ಲಿಸಿರುತ್ತೇವೆ. ನಿಮ್ಮ ಮುತ್ತಾತ ಮುದ್ದಯ್ಯರವರಿಗೆ ಎಷ್ಟು ಸ್ವತ್ತುಗಳು ಇದ್ದವು ಎಂದರೆ 3 ಐಟಂಗಳು ಇದ್ದವು, ಸ.ನಂ.ಗಳು ನೆನಪಿಲ್ಲ. ಈ ದಾವೆಯನ್ನು 3 ಸ್ವತ್ತುಗಳಿಗಾಗಿ ಸಲ್ಲಿಸಿರುತ್ತೇನೆ. ನಾನು ಡಿಗ್ರಿ ವಿದ್ಯಾಭ್ಯಾಸ ಮಾಡಿರುತ್ತೇನೆ. ದಾವೆಯನ್ನು ಸಲ್ಲಿಸಲು ನಮ್ಮ ವಕೀಲರಿಗೆ ನನ್ನ ತಂದೆ-2 ನೇ ಪ್ರತಿವಾದಿ ಮತ್ತು ನಾನು ಮಾಹಿತಿ ಕೊಟ್ಟಿರುತ್ತೇವೆ. ಇಂಗ್ಲೀಷ್ ಓದಲು ಬರುವುದಿಲ್ಲ. ನೀವು ಈ ದಾವೆಯನ್ನು ದಾವಾ ಸ್ವತ್ತು ಸ.ನಂ.8 ಕೇವಲ ಒಂದು ಸ್ವತ್ತಿಗಾಗಿ ಸಲ್ಲಿಸಿರುತ್ತೀರಿ ಎಂದರೆ ಸರಿ. ಇನ್ನುಳಿದ 2 ಸ್ವತ್ತುಗಳನ್ನು ಸೇರಿಸಿ ದಾವೆಯನ್ನು ಸಲ್ಲಿಸಲು ನಿಮಗಿದ್ದ ತೊಂದರೆ ಏನು ಎಂದರೆ ಸಾಕ್ಷಿಯು ಈ ದಾವೆಯನ್ನು ಬಗೆಹರಿಸಿಕೊಂಡು ಹಾಕೋಣ ಎಂದುಕೊಂಡೆ ಎನ್ನುತ್ತಾರೆ.

2. ನೀವು, ನಿಮ್ಮ ತಮ್ಮ 2 ನೇ ವಾದಿ ಮತ್ತು ತಂದೆ 2 ನೇ ಪ್ರತಿವಾದಿ ಎಲ್ಲರೂ ಸೇರಿ ಪ್ರಸ್ತುತ ದಾವೆಯ ಹೊರತಾಗಿ ಭಾಗಕ್ಕಾಗಿ ಎಷ್ಟು ದಾವೆಗಳನ್ನು ಸಲ್ಲಿಸಿದ್ದೀರಿ ಎಂದರೆ ಸಾಕ್ಷಿಯು ಯಾವುದೇ ದಾವೆ ಸಲ್ಲಿಸಿಲ್ಲ ಎನ್ನುತ್ತಾರೆ. ಅಸಲು ದಾವಾ ಸಂಖ್ಯೆ 628/2010 ರಂತೆ ಸ.ನಂ.60/2 ಕ್ಕೆ ಸಂಬಂಧಿಸಿದಂತೆ ನೀವು ಮತ್ತು ನಿಮ್ಮ ತಮ್ಮ, ನಿಮ್ಮ ತಂದೆಯವರ ವಿರುದ್ಧ 1 ನೇ ಅಧಿಕ ಸಿವಿಲ್ ನ್ಯಾಯಾಲಯ, ತುಮಕೂರಿನಲ್ಲಿನಲ್ಲಿ ಭಾಗಕ್ಕಾಗಿ ದಾವೆಯನ್ನು ಸಲ್ಲಿಸಿರುತ್ತೀರಿ ಎಂದರೆ ಸಾಕ್ಷಿಯು ಸಲ್ಲಿಸಿಲ್ಲ ಎನ್ನುತ್ತಾರೆ. ಸದರಿ ದಾವೆಯನ್ನು ದಿಃ

24.09.2010 ರಂದು ಎಲ್ಲರೂ ರಾಜೀ ಮಾಡಿಕೊಂಡಿರುತ್ತೀರಿ ಎಂದರೆ ಸರಿಯಲ್ಲ. ಸದರಿ ರಾಜಿ ಪತ್ರದಲ್ಲಿ ಸ.ನಂ 60/2 ಸ್ವತ್ತನ್ನು ನಿಮ್ಮ ತಮ್ಮ ಮತ್ತು ತಂದೆ ಇಬ್ಬರೂ ಒಪ್ಪಿ ಅದನ್ನು ನಿಮಗೆ ಬಿಟ್ಟು ಕೊಟ್ಟ ಹಾಗೆ ಮತ್ತು ಅವರು ನಿಮ್ಮಿಂದ ತಲಾ 50 ಸಾವಿರ ರೂ. ಹಣವನ್ನು ಪಡೆದು ಯಾವುದೇ ಹಕ್ಕು ಇಲ್ಲ ಎಂದು ಹೇಳಿ ರಾಜೀ ಮಾಡಿಕೊಂಡಿರುತ್ತೀರಿ ಎಂದರೆ ಸರಿಯಲ್ಲ. ನೀವು, ನಿಮ್ಮ ತಮ್ಮ ಮತ್ತು ತಂದೆ ಎಲ್ಲರೂ ಶಾಮೀಲಾಗಿ 1 ನೇ ಪ್ರತಿವಾದಿಯನ್ನು ಹೊರತುಪಡಿಸಿ, ಅವರ ತಿಳುವಳಿಕೆಗೆ ಇಲ್ಲದೆ ದಾವೆಯನ್ನು ಸಲ್ಲಿಸಿಕೊಂಡು ರಾಜೀ ಮಾಡಿಕೊಂಡಿರುತ್ತೀರಿ ಎಂದರೆ ಸರಿಯಲ್ಲ.

3. ದಾವಾ ಸ್ವತ್ತು ಸ.ನಂ. 8 ರ ವಿಸ್ತೀರ್ಣ ಎಷ್ಟು ಎಂದರೆ 1 ಎಕರೆ 36 ಗುಂಟೆ. ದಾವಾ ಸ್ವತ್ತು ಯಾರ ಹೆಸರಿನಲ್ಲಿ ಇದೆ ಎಂದರೆ ಸಾಕ್ಷಿಯು ಈ ಮುಂಚೆ ನಮ್ಮ ಮುತ್ತಾತನ ಹೆಸರಿನಲ್ಲಿತ್ತು, ನಂತರ ಯಾರ ಹೆಸರಿಗೆ ಬದಲಾಗಿದೆ ಎಂದು ಗೊತ್ತಿಲ್ಲ. ನೀವು, ನಿಮ್ಮ ತಮ್ಮ ಮತ್ತು ತಂದೆ ಎಲ್ಲರೂ ಸೇರಿ ಹೆಬ್ಬೂರು ಭೀಮರಾಜು ಎಂಬುವವರಿಗೆ ಒಂದು ಸ್ವತ್ತನ್ನು ಮಾರಾಟ ಮಾಡಿರುತ್ತೀರಿ ಎಂದರೆ ಸಾಕ್ಷಿಯು ಮಾರಾಟ ಮಾಡಿಲ್ಲ, ಬಾಡಿಗೆ ಕೊಟ್ಟಿರುತ್ತೇವೆ ಎನ್ನುತ್ತಾರೆ. ಅದರ ಸ.ನಂ. ಏನು ಎಂದರೆ ಗೊತ್ತಿಲ್ಲ. ಬಾಡಿಗೆಗೆ ಕೊಟ್ಟ ಬಗ್ಗೆ ದಾಖಲೆ ಮನೆಯಲ್ಲಿ ಇದೆ. ನೀವು ಬಾಡಿಗೆ ಕೊಟ್ಟಿಲ್ಲ, ಶುದ್ಧ ಕ್ರಯ ಪತ್ರದ ಮೂಲಕ ಅದನ್ನು ನೀವು, ರಾಜೀ ಮಾಡಿಕೊಂಡಿ ಡಿಕ್ರಿ ಆಧಾರಿತವಾಗಿ ಮಾರಾಟ ಮಾಡಿರುತ್ತೀರಿ, ಆದ ಕಾರಣ ಸದರಿ ಸ.ನಂ. 60/2 ನ್ನು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತು ನಿಮ್ಮ ಮುತ್ತಾತನಿಗೆ ಹೇಗೆ ಬಂತು ಎಂದರೆ ಗೊತ್ತಿಲ್ಲ. ನೀವು ನಿಮ್ಮ ವಾದ ಪತ್ರದಲ್ಲಿ ವಾದಿಗಳಾದ ನೀವು ಮತ್ತು ಪ್ರತಿವಾದಿಗಳು ಹಾಗೂ ನಿಮ್ಮ ಮುತ್ತಾತ ಎಲ್ಲರೂ ದಾವಾ ಸ್ವತ್ತಿನ ಜಂಟಿ ಸ್ವಾಧೀನಾನುಭವದಲ್ಲಿ ಇದ್ದೇವೆ ಎಂದು ಹೇಳಿರುತ್ತೀರಿ, ಆ ಬಗ್ಗೆ ದಾಖಲೆಗಳನ್ನು ನ್ಯಾಯಾಲಯಕ್ಕೆ ಕೊಟ್ಟಿರುತ್ತೀರಾ ಎಂದರೆ ಇಲ್ಲ. ಅದೇ ರೀತಿ ನೀವು, ನಿಮ್ಮ ತಮ್ಮ ಮತ್ತು ನಿಮ್ಮ ತಂದೆ ಎಲ್ಲರೂ ಒಟ್ಟು ಕುಟುಂಬದಲ್ಲಿ ಇದ್ದೀರಿ ಎಂದು ತೋರಿಸಲುದಾಖಲೆಯನ್ನು ಸಲ್ಲಿಸಿದ್ದೀರಾ ಎಂದರೆ ಇಲ್ಲ.

4. ನನ್ನ ಜನ್ಮ ದಿನಾಂಕಃ 15.06.1989. ನಿಮಗೆ ಬುದ್ದಿ ಬಂದ ಕಾಲಕ್ಕೆ ನಿಮ್ಮ ತಾತ ಮತ್ತು ಅವರ ಅಣ್ಣ ಶಿವಲಿಂಗಯ್ಯ ಜೀವಂತ ಇದ್ದರಾ ಎಂದರೆ ಸಾಕ್ಷಿಯು ಇದ್ದರೂ ಎನ್ನುತ್ತಾರೆ. ನನ್ನ ತಾತ ಮಹಾದೇವಪ್ಪ ಮರಣಿಸಿ ಸುಮಾರು 5-6 ವರ್ಷಗಳು ಆಗಿರಬಹುದು. 1977 ರಲ್ಲಿ ನಿಮ್ಮ ತಾತ ಮತ್ತು ಅವರ ಅಣ್ಣ ಶಿವಲಿಂಗಯ್ಯ ನಿಮ್ಮ

ಮುತ್ತಾತನಿಗೆ ಸೇರಿದ ಆಸ್ತಿಗಳನ್ನು ವಿಭಾಗ ಮಾಡಿಕೊಂಡಿದ್ದರು ಎಂದರೆ ಗೊತ್ತಿಲ್ಲ. ದಿಃ 02.01.1980 ರಲ್ಲಿ ಸ.ನಂ.60/2 ಮತ್ತು 60/3 ಸ್ವತ್ತನ್ನು ನಿಮ್ಮ ತಾತ ಅವರ ಪರವಾಗಿ ಮತ್ತು ಅಪ್ರಾಪ್ತರಾಗಿದ್ದ ನಿಮ್ಮ ತಂದೆ ರವರ ಪರವಾಗಿ ಜಯಮ್ಮ ಎಂಬುವವರಿಗೆ ನೊಂದಾಯಿತ ಕ್ರಯ ಪತ್ರದ ಮೂಲಕ ಮಾರಾಟ ಮಾಡಿದ್ದಾರೆ ಎಂದರೆ ಗೊತ್ತಿಲ್ಲ. ಸದರಿ ಕ್ರಯ ಪತ್ರದಲ್ಲಿ ನಿಮ್ಮ ತಾತ ಮತ್ತು ಅವರ ಅಣ್ಣ ನಡುವೆ ಆದಂತಹ ಸದರಿ ವಿಭಾಗ ಪತ್ರದಂತೆ ನಿಮ್ಮ ತಾತನ ಪಾಲಿಗೆ ಬಂದಂತಹ ಸ್ವತ್ತುಗಳು ಎಂದು ಒಕ್ಕಣೆ ಇದೆ ಎಂದರೆ ಗೊತ್ತಿಲ್ಲ. ಆ ವಿಚಾರ ನಿಮ್ಮ ತಂದೆಯವರಿಗೆ ಗೊತ್ತಿದ್ದು, ನಿಮ್ಮ ತಂದೆಯವರಿಂದ ನೀವು ಕೂಡ ವಿಷಯ ತಿಳಿದುಕೊಂಡಿದ್ದು, ಆದ ಕಾರಣ ನೀವು ಸದರಿ ಸ.ನಂ.60/2 ಮತ್ತು 60/3 ಸ್ವತ್ತುಗಳನ್ನು ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿಯಲ್ಲ. ಈ ಎಲ್ಲಾ ವಿಚಾರಗಳು ಗೊತ್ತಿದ್ದು ನಿಮ್ಮ ತಾತನಿಗೆ ವಿಭಾಗ ಪತ್ರದಂತೆ ಬಂದಂತಹ ಎಲ್ಲಾ ಸ್ವತ್ತುಗಳನ್ನು ಅವರು ಮಾರಾಟ ಮಾಡಿದ್ದು, ವಿಭಾಗ ಪತ್ರದಲ್ಲಿ 1 ನೇ ಪ್ರತಿವಾದಿರವರ ತಂದೆಗೆ ದಾವಾ ಸ್ವತ್ತು ಹೋಗಿದ್ದು, ಅದನ್ನು ಹೊಡೆಯುವ ಉದ್ದೇಶದಿಂದ ಸುಳ್ಳು ದಾವೆಯನ್ನು ಸಲ್ಲಿಸಿರುತ್ತೀರಾ ಎಂದರೆ ಸರಿಯಲ್ಲ.

5. ನಿಮ್ಮ ತಂದೆ 2 ನೇ ಪ್ರತಿವಾದಿರವರು 1 ನೇ ಪ್ರತಿವಾದಿರವರ ತಂದೆ ಯನ್ನು ಅವರ ತಂದೆ ಎಂದು ಸುಳ್ಳಾಗಿ ಹೇಳಿ ವಂಶವೃಕ್ಷವನ್ನು ಸೃಷ್ಟಿ ಮಾಡಿ ಖಾತೆಯನ್ನು ಅವರ ಹೆಸರಿಗೆ ಬದಲಾವಣೆ ಮಾಡುವಂತೆ ಅರ್ಜಿಯನ್ನು ಸಲ್ಲಿಸಿದ್ದು, ಎಂ.ಆರ್ 12/2005-2006 ರಂತೆ ನಿಮ್ಮ ತಂದೆಯವರ ಹೆಸರಿಗೆ ಖಾತಾ ಮಾಡಿಸಿಕೊಂಡಿರುತ್ತಾರೆ ಎಂದರೆ ಗೊತ್ತಿಲ್ಲ. ಈ ವಿಚಾರವನ್ನು ತಿಳಿದುಕೊಂಡ 1 ನೇ ಪ್ರತಿವಾದಿರವರು ಎ.ಸಿ ನ್ಯಾಯಾಲಯದಲ್ಲಿ ಆರ್.ಆರ್.ಟಿ ಅಪೀಲು ಸಂಖ್ಯೆಃ 139/2006-2007 ರಂತೆ ಮೇಲ್ಮನವಿಯನ್ನು ಸಲ್ಲಿಸಿದ್ದರೂ ಎಂದರೆ ಸರಿಯಲ್ಲ. ಸದರಿ ಮೇಲ್ಮನವಿ ದಿಃ 25.11.2009 ರಲ್ಲಿ ಪುರಸ್ಕರಿಸಲ್ಪಟ್ಟಿರುತ್ತದೆ ಎಂದರೆ ಗೊತ್ತಿಲ್ಲ. ಅಪೀಲು ಆದೇಶದಂತೆ ನಿಮ್ಮ ತಂದೆಯವರ ಹೆಸರಿಗಿದ್ದ ಎ.ಆರ್ 12/2005-2006 ಖಾತೆಯನ್ನು ರದ್ದುಗೊಳಿಸಿ, ಎಂ.ಆರ್ 12/2009-2010 ರಂತೆ 1 ನೇ ಪ್ರತಿವಾದಿಯ ಹೆಸರಿಗೆ ಖಾತೆಯನ್ನು ಮಾಡಲಾಗಿರುತ್ತದೆ ಎಂದರೆ ಗೊತ್ತಿಲ್ಲ. ಈ ಎಲ್ಲಾ ವಿಚಾರಗಳು ನಿಮಗೆ ಗೊತ್ತಿದ್ದರೂ ಕೂಡ ಗೊತ್ತಿಲ್ಲ ಎಂದು ಹೇಳಿ ಸುಳ್ಳು ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ನೀವು ರಾಮೇನಹಳ್ಳಿ ಗ್ರಾಮ ಬಿಟ್ಟು ಬೆಂಗಳೂರಿಗೆ ಹೋಗಿ ನೆಲೆಸಿ ಎಷ್ಟು ವರ್ಷ ಆಯಿತು ಎಂದರೆ 2005 ರಲ್ಲಿ ಹೋಗಿರುತ್ತೇನೆ. ಅಲ್ಲಿಂದ ಈಚೆಗೆ ನೀವು ಊರು ಕಡೆಗೆ ಬಂದಿರುವುದಿಲ್ಲ ಎಂದರೆ ಸರಿಯಲ್ಲ. ನೀವು ಈಗಾಗಲೇ ಹೇಳಿದಂತೆ 3

ಐಟಂ ಸ್ವತ್ತುಗಳಿಗೆ ಸಂಬಂಧಿಸಿದಂತೆ ತುಮಕೂರು ನ್ಯಾಯಾಲಯದಲ್ಲಿ ಎಷ್ಟು ಪ್ರಕರಣಗಳು ಬಾಕಿ ಇವೆ ಎಂದರೆ ಗೊತ್ತಿಲ್ಲ.

6. ರಾಮೇನಹಳ್ಳಿ ಗ್ರಾಮದ ಬಸವರಾಜು ಮತ್ತು ಆತನ ಹೆಂಡತಿ ಮಹಾದೇವಮ್ಮ ಗೊತ್ತಾ ಎಂದರೆ ಗೊತ್ತಿಲ್ಲ. ನಿಮ್ಮ ದೊಡ್ಡ ತಾತ ಶಿವಲಿಂಗಯ್ಯ ಮತ್ತು ಆತನ ಹೆಂಡತಿ ವಿರುದ್ಧ ದಾವಾ ಸಂಖ್ಯೆ: 758/1998 ರಂತೆ ಸ.ನಂ.60/1, 60/2, 60/3 ಮತ್ತು ಸ.ನಂ. 8 ಕ್ಕೆ ಸಂಬಂಧಿಸಿದಂತೆ ದಾವೆಯನ್ನು ಹೂಡಿದ್ದರೂ ಎಂದರೆ ಗೊತ್ತಿಲ್ಲ. ನಿಮ್ಮ ದೊಡ್ಡ ತಾತ ಮತ್ತು ಅಜ್ಜಿ ಮರಣಿಸಿದ ನತಂರ ಅವರ ಮಗನಾದ ಈ ದಾವೆಯಲ್ಲಿನ 1 ನೇ ಪ್ರತಿವಾದಿ ಅವರ ಅಂಗವಿಕಲರಾದ ಕಾರಣ ಜಿ ಪಿ ಎ ದಾರರ ಮೂಲಕ ಈಗಲೂ ದಾವೆಯನ್ನು ನಡೆಸುತ್ತಿದ್ದಾರೆ ಎಂದರೆ ಸರಿ. ಸದರಿ ದಾವೆಯನ್ನು ತೀರ್ಪಿಗಾಗಿ ದಿನಾಂಕಃ 29.01.2026 ಕ್ಕೆ ಕಾಯ್ದಿರಿಸಲಾಗಿದೆ ಎಂದರೆ ಗೊತ್ತಿಲ್ಲ. ಮೇಲೆ ಹೇಳಿದ ಕ್ರಯದಾರರು ಜಯಮ್ಮ ರವರು ಸ.ನಂ 60/2, 60/3 ಕ್ಕೆ ಸಂಬಂಧಿಸಿದಂತೆ ಬಸವರಾಜು, ಮಹಾದೇವಮ್ಮ ಮತ್ತು 1 ನೇ ಪ್ರತಿವಾದಿ ಮತ್ತು ಭೀಮರಾಜು ಎಂಬುವವರ ವಿರುದ್ಧ ದಾವಾಸಂಖ್ಯೆ: 1565/2011 ರಂತೆ 3 ನೇ ಅಧಿಕ ಸಿವಿಲ್ ನ್ಯಾಯಾಲಯದಲ್ಲಿ ದಾವೆಯನ್ನು ಸಲ್ಲಿಸಿದ್ದರೂ ಆ ದಾವೆಯು ಈ ಮೇಲೆ ಹೇಳಿ ದಾವಾ ಸಂಖ್ಯೆ: 758/1998 ದಾವೆಯೊಂದಿಗೆ ಕ್ಲಬ್ ಆಗಿದ್ದು, ಎರಡೂ ದಾವೆಯು ಅಂತಿಮ ತೀರ್ಪಿಗೆ ಕಾಯ್ದಿರಿಸಲಾಗಿದೆ ಎಂದರೆ ಗೊತ್ತಿಲ್ಲ. ಸದರಿ ಕೇಸುಗಳ ಬಗ್ಗೆ ನಿಮಗೆ ಗೊತ್ತಿದ್ದರೂ ಕೂಡ ಗೊತ್ತಿಲ್ಲ ಎಂದು ಹೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಾ ಎಂದರೆ ಸರಿಯಲ್ಲ.

**ಮುಂದುವರೆದ ಪಾಟೀ ಸವಾಲಿಗೆ ಕಾಲವಕಾಶ ಕೋರಿದ್ದು, ಕಾಲವಕಾಶ ನೀಡಿ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ

6ನೇ ಅಧಿಕ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ, ತುಮಕೂರು.

ಒಎಸ್. 733/2021
ಪಿ. ಡಬ್ಲ್ಯೂ 1-

ಸಾಕ್ಷಿಯನ್ನು ಪಾಟೀ ಮಾಡುವ ಸಂದರ್ಭದಲ್ಲಿ ಪ್ರತಿವಾದಿ ಹಾಗೂ ವಾದಿ ವಕೀಲರು ಪರಸ್ಪರ ನ್ಯಾಯಾಲಯದಲ್ಲಿ ವಾಗ್ವಾದಕ್ಕೆ ಇಳಿದು ನ್ಯಾಯಾಲಯದ ಸಮಯವನ್ನು ಕಳೆಯುತ್ತಿದ್ದರಿಂದ ನ್ಯಾಯಾಲಯಕ್ಕೆ ಅಗೌರವ ತೋರಿಸುತ್ತಿರುವುದರಿಂದ ಸಾಕ್ಷಿಯನ್ನು ಕೆಳಗೆ ಇಳಿಸಲಾಯಿತು ಹಾಗೂ ಪ್ರತಿವಾದಿ ಹಾಗೂ ವಾದಿ ವಕೀಲರು ಸೂಚನೆ ನೀಡಿದರೂ ನ್ಯಾಯಾಲಯದ ಸೂಚನೆಯನ್ನು ಗಮನಕ್ಕೆ ತೆಗೆದುಕೊಳ್ಳದೆ ತೆರೆದ ನ್ಯಾಯಾಲಯದಲ್ಲಿ ಜಗಳವನ್ನು ಮುಂದುವರಿಸಿರುತ್ತಾರೆ. ಆದ್ದರಿಂದ ದಾವೆಯನ್ನು ಮುಂದಿನ ದಿನಾಂಕದಂದು ಮುಂದೂಡಲಾಯಿತು.